

❛ಕವಿತೆಯೆಂದರೆ ಕರೆ, ಮೌನ ಮತ್ತು ದುಷ್ಟಶಕ್ತಿಗಳಿಗೆ ಕೊಡುವ ಶಾಪ. ನೋಡಿ ಸಾವಿರಾರು ವರ್ಷಗಳಿಂದ ಕವಿತೆ ಏನೆಲ್ಲಾ ಆಗಿ ಒದಗಿಬಂದಿದೆ. ವಜ್ರಕ್ಕೆ ರೂಪ ದಕ್ಕುವುದು ಯಾವಾಗ? ಅದಕ್ಕೆ ಸಾಣೆ ಹಿಡಿದಾಗಲೇ. ಅದನ್ನು ಹಲವು ಮಗ್ಗಲುಗಳಿಂದ ಕಟೆದಾಗ ಮಾತ್ರ. ಕವಿತೆಯೂ ಹಾಗೆಯೇ. ಯಾರಾದರೂ ಕವಿತೆಯನ್ನು ಕಟಕಟೆಯಲ್ಲಿ ನಿಲ್ಲುಸುತ್ತಿದ್ದಾರೆಂದರೆ ಇದರರ್ಥ ಅದರ ಹೊಳಪಿಗೆ ನೆರವಾಗುತ್ತಿದ್ದಾರೆ ಅಂತ.

ಬರೆಯುವಾಗ ಅದಕ್ಕೆ ಅಂತ್ಯವಿರುವುದಿಲ್ಲ. ಅದು ಬದಲಾಗುತ್ತದೆ, ಹೊಸ ಹೊಸದನ್ನು ಒಳಗೊಳ್ಳುತ್ತದೆ. ಅನೇಕ ಅಂತರ್ ಸಂಬಂಧಗಳು ತೆರೆದುಕೊಳ್ಳುತ್ತವೆ. ಈ ಮುಕ್ತತೆ ಕಾವ್ಯದಲ್ಲಿ ನನಗೆ ಯಾವಾಗಲೂ ಇಷ್ಟ. ಬಾಬಾ ನಾಗಾರ್ಜುನ ಪ್ರಗತಿವಾದಿ ಕವಿ, ರಾಹುಲ್ ಸಾಂಕೃತ್ಯಾಯನ ಜೊತೆ ಇದ್ದವರು. ನಂತರ ಬೌದ್ಧರಾದರು. ಶ್ರೀಲಂಕಾಗೆ ಹೋಗಿ ಬಂದರು. ತಿಬ್ಬತ್‌ಗೆ ಹೋಗಿಬಂದರು. ಯಾವ್ಯಾವುದೋ ಪ್ರಯೋಗಗಳಿಗೆ ಒಡ್ಡಿಕೊಂಡರು. ಇವರು ನನಗೆ ತುಂಬಾ ಇಷ್ಟ. ಅವರದೊಂದು ಕವಿತೆ ಇದೆ - ಹೆಣ್ಣುಮಗಳೊಬ್ಬಳು ಅಕ್ಕಿಯಲ್ಲಿನ ಹರಳುಗಳನ್ನು ಆಯುತ್ತಿದ್ದಾಳೆ. ಬಗಲಲ್ಲಿ ರೋಗಪೀಡಿತ ಮಗು ಅಳುತ್ತಿದೆ. ಇನ್ನೊಂದೆಡೆ ಅನೇಕ ದಿನಗಳಿಂದ ಒಲೆ ಅಳುತ್ತಿದೆ, ಬೀಸುವಕಲ್ಲು ಅಸಹಾಯಕತೆಯಿಂದ ಕೂತಿದೆ ಅಂತ. ಇದಕ್ಕಿಂತ ಬಡತನದ ಚಿತ್ರ ಬೇಕೆ? ಪ್ರಭುತ್ವದ ಬಂದೂಕಿಗೆ ಜನರ ಕೂದಲನ್ನು ಕೊಂಕಿಸುವ ಶಕ್ತಿಯೂ ಇಲ್ಲ ಅನ್ನೋ ಅರ್ಥದಲ್ಲಿ ಇನ್ನೊಂದು ಕವಿತೆಯಿದೆ. ಇವೆಲ್ಲಾ ಕವಿತೆಗಳು ನನಗೆ ಅನೇಕ ದಾರಿಗಳನ್ನು ತೋರಿಸಿದವು. ನಾನು ಜೀವನದ ಕಡೆ ಪಯಣಿಸಬೇಕೆಂದು ನಿರ್ಧರಿಸಿದೆ. ಲೋಕದ ನುಡಿಯನ್ನು ಕವಿತೆಯಲ್ಲಿ ತರಬೇಕೆಂಬ ಪಾಠವನ್ನೂ ಕೂಡ ನಾನು ಇಂಥವರಿಂದ ಕಲಿತೆ. ಅದನ್ನು ವಿಸ್ತರಿಸಬಹುದು ಅಂತ ಕೂಡ ಅನಿಸಿತು. ರಾಜಕೀಯ ಕಾವ್ಯದ ಹೊಸ ಮಾದರಿಗಳನ್ನು ಇವರಿಂದ ಕಲಿತೆ. ಮನುಷ್ಯರ ಭಾಗ್ಯವನ್ನು ಈಗ ನಿರ್ಧರಿಸುವುದು ರಾಜಕೀಯವೆ. ನಾನು ಬದುಕಬೇಕೆ ಅಥವಾ ಕೊಲೆಯಾಗಬೇಕೆ ಅನ್ನುವುದನ್ನು ಈಗ ನಿರ್ಧರಿಸುವುದು ರಾಜಕಾರಣ. ಆಮೇಲೆ ನಾಗಾರ್ಜುನರಿಂದ ನಿರಾಲಾ ಅವರ ಕಡೆ ಹೊರಳಿಕೊಂಡೆ. ಯಾರು ಕೂಡ ಹೇಳಲು ಸಾಧ್ಯವಾಗದ ಅನೇಕ ಸಂಗತಿಗಳು ನಿರಾಲಾರ ಕಾವ್ಯದಲ್ಲಿವೆ ಅನಿಸಿತು. ಜೀವನದ ಜಟಿಲತೆ, ಭಾವಗಳ ಗಾಂಭೀರ್ಯ, ಆಂತರಿಕ ಜಗತ್ತು, ಭಾಷೆಯ ಸಾಂದ್ರತೆ, ಹೊಸ ಬಿಂಬ, ಪ್ರತೀಕಗಳ ನಿರ್ಮಾಣ ಇವೆಲ್ಲ ಅವರಲ್ಲಿ ಕಂಡಿತು. ನಿರಾಲಾ ಅವರ ಕಾವ್ಯ ಜಗತ್ತು ದೊಡ್ಡದು. ನಂತರ ಕಬೀರ್ ಮತ್ತು